ಸಂಗತಿ ನನಗೆ ಅವನನ್ನು ವಿಶೇಷವಾಗಿ ಗಮನಿಸುವಂತೆ ಮಾಡಿತು. ಸ್ನೇಹಿತೆಯ ಮನೆಗೆ ಹೋಗುವ ನೆಪ ಮಾಡಿಕೊಂಡು ಒಂದೆರಡು ಬಾರಿ ಅವನ ಮನೆಯ ಮುಂದೆ ಚಂದನೆಯ ಡ್ರೆಸ್ಸು ಹಾಕಿಕೊಂಡು ನಾನು ಅಡ್ಡಾಡಿದ್ದಿರಬಹುದು. ಅವನು ದಿನವೂ ಓಡಾಡುವ ರಸ್ತೆಯಲ್ಲಿ ಹುಡುಕಿ ಅವನ ಜೊತೆ ದೃಷ್ಟಿ ಸೇರಿಸಿ ಮುಂಗುರುಳು ನೇವರಿಸುತ್ತ ಮುಗುಳ್ನಗೆಯ ತೇಲಿಬಿಟ್ಟಿರಬಹುದು. ಅಷ್ಟೇ. ಅಷ್ಟೇ. ಹುಬ್ಬಳ್ಳಿಯಂಥ ಪುಟ್ಟ ಪಟ್ಟಣಗಳಲ್ಲಿ ಇಂಥ ಗುಪ್ತ ವ್ಯವಹಾರಗಳನ್ನು ಎಲ್ಲರ ಕಣ್ಣು ತಪ್ಪಿಸಿಯೂ ನಡೆಸಬಹುದು.

ನಮ್ಮ ಸ್ನೇಹ ಶುರುವಾದ ಹೊಸದರಲ್ಲಿ ಸುಹಾಸನಿಗೆ ಅಮೆರಿಕಕ್ಕೆ ಬರುವ ಬಗ್ಗೆ ಅಷ್ಟೇನೂ ಉತ್ಸಾಹವಿದ್ದಂತಿರಲಿಲ್ಲ. “ಕ್ಯಾಲಿಫೋರ್ನಿಯಾದಾಗಿರೋ ನಮ್ಮ ಶಂಕರ ಮಾಮಾ ಅದೇನೋ ಡೈವರ್ಸಿಟಿ ಗ್ರೀನ್‌ಕಾರ್ಡ್ ಕೋಟಾದಾಗ ನನ್ನ ಹೆಸರು ಹಚ್ಚಿದ್ದರಂತ. ಎಲ್ಲ ಕಡೆಗಳಿಂದ್ಲೂ ವಲಸಿಗರು ಬರಲಿ ಅಂತ ಅಮೆರಿಕದ ಸರ್ಕಾರ ನಡೆಸೋ ಲಾಟರಿ ಅದು. ಇಂಡಿಯಾದಾಗ ಹುಟ್ಟಿದೋರು ಈ ಲಾಟರಿಗೆ ಎಲಿಜಿಬಲ್ ಆಗಂಗಿಲ್ಲ. ಯಾಕಂದ್ರ ಈಗಾಗಲೇ ಸಾಫ್ಟವೇರು, ಮೆಡಿಕಲ್ ಅಂತ ಅಮೆರಿಕಕ್ಕ ಇಲ್ಲಿಂದ ವರ್ಷಾವರ್ಷಾನೂ ಜನ ಹೋಗತಾರಲ್ಲ. ನಾನು ದುಬೈನಾಗ ಹುಟ್ಟಿದ್ದರಿಂದ ನನ್ನ ಹೆಸರು ಸೆಲೆಕ್ಟ್ ಆಗೇತಿ. ನನ್ನ ದೋಸ್ತರೆಲ್ಲ ಇಂಥಾ ಲಕ್ ಯಾರಿಗೂ ಸಿಗಂಗಿಲ್ಲ ಅಂತ ಹೇಳತಾರ. ಆದರ, ಇಲ್ಲಿರೋ ಎಲ್ಲಾನೂ ಬಿಟ್ಟು ಅಲ್ಲಿ ಹೋಗಿ ಏನು ಮಾಡಲಿ ಅಂತ ಆ ಯೋಚನಿ ಬಿಟ್ಟೇನಿ” ಅಂತಲೇ ಹೇಳಿದ್ದ.

ಸುಹಾಸನ ತಂದೆತಾಯಿ ದುಬೈನಲ್ಲಿ ತುಂಬ ವರ್ಷ ಇದ್ದು ಬಂದಿದ್ದು ನಮ್ಮ ಸಮುದಾಯದವರಿಗೆಲ್ಲ ಗೊತ್ತಿತ್ತು. ಅವರ ತಂದೆಯ ಹೆಸರನ್ನು ಹೇಳುವಾಗ, “ಅದೇ, ಆ ದುಬೈ ಮಲ್ಲಿಕಾರ್ಜುನ” ಅಂತಲೇ ಎಲ್ಲರೂ ಮಾತನಾಡುತ್ತಿದ್ದಿದ್ದು. ಸುಹಾಸ ಆಕಸ್ಮಿಕವಾಗಿ ದುಬೈನಲ್ಲಿ ಹುಟ್ಟಿದ್ದರಿಂದ ನಮ್ಮಿಬ್ಬರ ಬದುಕು ಬೇರೆಯೇ ತಿರುವಿನ ದಾರಿ ಹಿಡಿಯುವುದರಲ್ಲಿತ್ತು. ಅವನ ಮಾತಿನ ಧಾಟಿಯಲ್ಲಿ ಈ ನೆಗೆತ ಕೈಗೊಳ್ಳಲು ಸಣ್ಣದೊಂದು ಉತ್ತೇಜನ ಬೇಕಿರುವುದನ್ನು ಮನಗಂಡೆ.

ಬಾವಿ ತೋಡಲು ಹೊರಟವರಿಗೆ ನೆಲ ಅಗೆಯುವ ಮುನ್ನವೇ ಜಲಮೂಲ ಎಲ್ಲಿದೆಯೆಂಬ ಅಂದಾಜು ಇರುತ್ತದೆ. ಮದ್ದನ್ನು ತೆಳ್ಳಗಿನ ಸೂಜಿಯಿಂದಲೇ ನೀಡಿದ್ದಾದರೂ ಅದು ಇಡೀ ದೇಹವ ವ್ಯಾಪಿಸುವಂತೆ ಎಲ್ಲಿ ತಾಕಬೇಕು, ಎಲ್ಲಿ ಮೀಟಬೇಕು ಎಂಬ ಬಗ್ಗೆ ನನಗೊಂದು ಸ್ಥೂಲ ಕಲ್ಪನೆಯಿತ್ತು. ನಮ್ಮ ಮನೆಯಲ್ಲಿ ಯಾರಿಲ್ಲದಾಗ ಮಾತನಾಡಲು ಕರೆದೆ. ಅವನ ಮನೆಗೂ ಒಂದೆರಡು ಬಾರಿ ಹೋಗಿರಬಹುದು. ಈ ಇಡೀ ಪ್ರಕ್ರಿಯೆ ಮುಗಿದಾಗ ಸುಹಾಸನಿಗೆ ನಾನಾಡಿದ ಮಾತುಗಳೆಲ್ಲ ಮಸುಕಾಗಿ ಅಮೆರಿಕಕ್ಕೆ ತೆರಳುವ ನಿರ್ಧಾರ ತನ್ನೊಳಗಿನಿಂದಲೇ ಒಡಮೂಡಿದ್ದು ಎಂಬ ನಂಬಿಕೆ ಜಾಗೃತವಾಗಿ ಉಳಿಯಬೇಕಾದುದು ನಮ್ಮಿಬ್ಬರಿಗೂ ಬೇರೆ ಬೇರೆ ಕಾರಣಗಳಿಗೆ ಮುಖ್ಯವಾಗಿತ್ತು.

ಇಲ್ಲಿಗೆ ಬಂದು ಎರಡು ವರ್ಷಗಳಲ್ಲಿ ಮಾರ್ಕೋ ಹುಟ್ಟಿದ. ಅಂದು ಸುಹಾಸ ಈ ದೇಶಕ್ಕೆ ಬರಲು ಬಿಲ್‌ಕುಲ್ ಇಷ್ಟವಿಲ್ಲ ಅಂತ ಸ್ಪಷ್ಟವಾಗಿ ಹೇಳಿಬಿಟ್ಟಿದ್ದರೆ ನಾನು ಅವನೊಟ್ಟಿಗೆ ಸಂಬಂಧ ಮುಂದುವರೆಸುತ್ತಿದ್ದೆನೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವ ಧೈರ್ಯವನ್ನು ನಾನಿನ್ನೂ ಮಾಡಿಲ್ಲ.

★★★

ಮಾರ್ಕೋನ ಮಧ್ಯರಾತ್ರಿಯ ಸುತ್ತಾಟಗಳ ಕುರಿತು ನನ್ನನ್ನು ದಿಗಿಲುಗೊಳಿಸಿದ ಇನ್ನೊಂದು ಸಂಗತಿಯೆಂದರೆ ಇತ್ತೀಚೆಗೆ ಅಪವೇಳೆಯ ನೀರವದಲ್ಲಿ ಒಂದು ಕಳ್ಳ ಹೆಜ್ಜೆಯ ಬದಲಾಗಿ ಎರಡು ಕಳ್ಳ ಹೆಜ್ಜೆಗಳನ್ನು ನಾನು ಗಮನಿಸತೊಡಗಿರುವುದು. ಮೆಟ್ಟಿಲು ಹತ್ತುವಾಗ, ಮನೆಯೊಳಗೆ ಓಡಾಡುವಾಗ, ಬಚ್ಚಲಿಗೆ ಹೋಗಿ ಬರುವಾಗ ಮಾರ್ಕೋನ ನುರಿತ ಸಪ್ಪಳಗಳ ನಾನು ಗುರುತಿಸಬಲ್ಲೆ. ಅಮ್ಮ ಎದ್ದಾಳೆಂಬ ಎಚ್ಚರಿಕೆಯಿದ್ದರೂ ಏಳಲಾರಳು ಎಂಬ ಆತ್ಮವಿಶ್ವಾಸದಲ್ಲಿ ಅವನು ನಡೆಯುತ್ತಾನೆ.